Reg. No. 

# BCMKAL 181/BCMKAL 154

## Choice Based Credit System/Credit Based II Semester B.Com. Examination, September 2022
## (2019 – 20 and Earlier Batches)
## KANNADA

Time : 3 Hours                                                                                  Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರಿಸಿ. **(3×8=24)**

1) ತಿರುನೀಲಕಂಠರ ಭಕ್ತಿ , ಶಿವನಿಷ್ಠೆ, ಪ್ರಾಮಾಣಿಕತೆ 'ತಿರುನೀಲಕಂಠರ ರಗಳೆ'ಯಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

**ಅಥವಾ**

ಮಾಗಡಿ ಕೆಂಪೇಗೌಡನ ಜೀವನವನ್ನು ಲಾವಣಿ ಹೇಗೆ ಚಿತ್ರಿಸಿದೆ ? ವಿವರಿಸಿರಿ.

2) ಪಟ್ಟದ ಗೊಂಬೆಗಳೊಂದಿಗಿರುವ ಭಾವನಾತ್ಮಕ ಸಂಬಂಧ ಕಥೆಯಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿರಿ.

**ಅಥವಾ**

ಗೌಡರ ಗಡಿಯಾರ ಕದಿಯಲು ಜೋಗಿ ನಿರ್ಧರಿಸಲು ಕಾರಣವೇನು ? ಇದರ ಪರಿಣಾಮವೇನಾಯಿತು ?

3) 'ಕೊಳ್ಳಿ' ನಾಟಕದ ಸಮಕಾಲೀನ ಪ್ರಸ್ತುತತೆಯನ್ನು ವಿಶ್ಲೇಷಿಸಿ.

**ಅಥವಾ**

ಪಟ್ಟಬಂಧೋತ್ಸವದ ಪೂರ್ವಾಭ್ಯಾಸಕ್ಕೆ ದ್ರೌಪದಿ ಹೋಗದಿರಲು ಕಾರಣವೇನು ? ವಿವರಿಸಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) 'ಕಾಲಾಂತರಗಳಲ್ಲಿ ನಾರಿ' ಕವನದ ಆಶಯವನ್ನು ವಿವರಿಸಿರಿ.

**ಅಥವಾ**

ದಯೆ ಹಿಂಸೆಯನ್ನು ಜಯಿಸಿದ ರೀತಿ 'ದಯೆಯೇ ಧರ್ಮದ ಕಣ್ಣು' ಕಥನ ಗೀತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

2) ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆ ಕುರಿತು ಬರೆಯಿರಿ.

**ಅಥವಾ**

ಮೂಗಿನ ವೈವಿಧ್ಯವನ್ನು 'ಮೂಗು' ಲಲಿತ ಪ್ರಬಂಧ ಹೇಗೆ ತಿಳಿಸಿದೆ ? ವಿವರಿಸಿರಿ.

**P.T.O.**

3) 'ಕೊಳ್ಳಿ' ನಾಟಕದ ಅಂತ್ಯದಲ್ಲಿ ''ವಿಜ್ಜಿ'' ಏನಾದಳು ? ವಿವರಿಸಿರಿ.

**ಅಥವಾ**

ಬಾಗಿಲಭಟ ಮತ್ತು ವಿಜ್ಜಿಯ ನಡುವೆ ನಡೆದ ತಿಕ್ಕಾಟದ ಸ್ವಾರಸ್ಯವನ್ನು ವರ್ಣಿಸಿರಿ.

III. ಈ ಕೆಳಗಿನವುಗಳಲ್ಲಿ **ಒಂದು** ಪದ್ಯದ ಹಿನ್ನೆಲೆ, ಭಾವಾರ್ಥ ಸ್ವಾರಸ್ಯ ಬರೆಯಿರಿ. **(1×5=5)**

ಹುಟ್ಟಿದ ಮನೆಯ ನಾನೆಲ್ಲಿ ತೊರೆದೇನು
ನಡುಮನೆ ಜ್ಯೋತಿ ಉರಿಯೋತನಕ । ಅಣ್ಣಯ್ಯ
ನಾನು ಅಲ್ಲಿಗಿಲ್ಲಿಗೆ ನಡೆದೇನು

**ಅಥವಾ**

ಅರಿಗಳನು ಹಿಡಿದು ಹೆಡೆಮುರಿಗಟ್ಟಿ ಹೊಸಗುವುದು
ಸುರಲೋಕ ಕೈದಿ ರಂಭೆಯೊಳು ರಮಿಸುವುದು
ಬರಿದೆ ನೀನೇಕೆ ಇನಿತು ಚೇಷ್ಟಿಸುವೆಯೆನೆ ಭೂಮಿಯೊ
ಳಿರುವ ಕೋತಿಗಳಾರ ಶಿಷ್ಯರೆಂಬುದು

IV. ಕೆಳಗಿನವುಗಳಲ್ಲಿ **ಎರಡನ್ನು** ಸಂದರ್ಭಸಹಿತ ವಿವರಿಸಿರಿ. **(2×4=8)**

1) ಚಂದಾದ ರಂಗೋಲಿ ಬಿಡಿಸಿದವಳು
2) ಮೂರು ವರ್ಣದ ಬಾವುಟಕೇ
3) ಅದಕೆ ಹೊನ್ನುಂಗಿನ್ನು ಸರಿಯೆ ಬೇಡಾ ಮಾತು
4) ಕೈಲಾಸದ ಗಿರಿಕಾಣೆ ನಮ್ಮ ತವರೂರು.

V. ಅ) ಕೆಳಗಿನವುಗಳಲ್ಲಿ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಶಾಂತಾ ನಾಗರಾಜ
2) ಮೇರಿ ರಮಾ
3) ಜಿಎಸ್‌ಟಿ ನೊಂದಣಿ
4) ಬಿದಿರು.

ಆ) ಕೆಳಗಿನವುಗಳಲ್ಲಿ **ಎರಡರ** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಖಾಂಡವ ವನ
2) ದ್ರೌಪದಿ
3) ನಾಟಕದ ಏಳನೆಯ ಮೆಟ್ಟಿಲಿನ ವಿಶೇಷತೆ
4) ಪಟ್ಟಬಂಧೋತ್ಸವ.

VI. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. **(12×1=12)**

1) ಮಾಗಡಿ ಕೆಂಪೇಗೌಡ ಲಾವಣಿಯನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ ?

2) 'ಪರಿಯಾಣ' ಎಂದರೇನು ?

3) ಮನಸ್ಸನ್ನು ಯಾವುದಕ್ಕೆ ಹೋಲಿಸಲಾಗಿದೆ ?

4) 'ತೇಂದುಳಿ' ಇದು ಯಾರ ಕವನ ಸಂಕಲನ ?

5) 'ಕುರುಕ್ಷೇತ್ರ' ಕಾದಂಬರಿಯನ್ನು ಬರೆದವರು ಯಾರು ?

6) ನಿಧಿಗೆ ಪಟ್ಟದಗೊಂಬೆಯನ್ನು ಮಾಡಿಕೊಟ್ಟವರು ಯಾರು ?

7) ಹುಟ್ಟುವಳಿ ತೆರಿಗೆ ಎಂದರೇನು ?

8) ಬಿ.ಜಿ.ಎಲ್. ಸ್ವಾಮಿಯವರ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ ?

9) ಕೌರವನಿಗೆ ಅರಗಿನ ಮನೆ ನಿರ್ಮಿಸಲು ನೆರವಾದವನು ಯಾರು ?

10) ಪಟ್ಟಬಂಧೋತ್ಸವದ ಮೆರವಣಿಗೆ ಯಾವ ಸ್ಥಳದಿಂದ ಹೊರಡಬೇಕೆಂದು ನಿಗದಿಯಾಗಿತ್ತು ?

11) ಡಾ.ಜಿ.ಎಸ್. ಭಟ್ಟರು ಬರೆದ 'ನೆನಪಿನ ರಂಗಸ್ಥಳ' ಎಂಬ ಪ್ರಖ್ಯಾತ ಜೀವನ ಚರಿತ್ರೆ ಯಾರ ಬಗ್ಗೆ ಇದೆ ?

12) ಕರ್ಣನ ಮಗನ ಹೆಸರೇನು ?